ಓ.ಎಸ್. ನಂ. 149/2016

ಪಿ.ಡಬ್ಲ್ಯೂ: 01 (Vijay Kumar)

ದಿನಾಂಕ: 20.12.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ – ಶ್ರೀ DGB ವಕೀಲರಿಂದ.

ವಾದ ಪತ್ರಕ್ಕೆ ನನ್ನ ತಂದೆ ಹಾಗೂ ವಕೀಲರ ಮಾಹಿತಿ ನೀಡಿ ಬರೆಸಿರುತ್ತಾರೆ. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತು. ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿರುವವರ ಗಂಡನ ಹೆಸರು ಟಿ ಬಸಪ್ಪ ಎಂದರೆ ಹೌದು. ಟಿ ಬಸಪ್ಪನ ತಂದೆಯ ಹೆಸರು ಟಿ ನಿಂಗಪ್ಪ ಎಂದರೆ ಹೌದು. ಟಿ ಬಸಪ್ಪನ ತಾತನ ಹೆಸರು ಟಿ ರಂಗಪ್ಪ ಎಂದರೆ ಅಲ್ಲ. ಆ ರೀತಿ ನಮ್ಮ ತಂದೆ ಹೇಳುತ್ತಿದ್ದ ಕಾರಣ ನಾನು ಹೇಳುತ್ತಿದ್ದೇನೆ.

ಟಿ ರಂಗಪ್ಪ ತೀರಿಕೊಂಡ ನಂತರ ಅವರ ಮಗ ನಿಂಗಪ್ಪನ ಹೆಸರಿನಲ್ಲಿ ದಾವಾ ಆಸ್ತಿಯ ಪಹಣಿಗಳು ಬಂದಿರುತ್ತವೆ ಎಂದರೆ ಇಲ್ಲ. ಈ ಹಿಂದೆ ದಾವಾ ಆಸ್ತಿ ಟಿ ನಿಂಗಪ್ಪನ ಹೆಸರಿಗೆ ಮ್ಯುಟೇಶನ್ ಆಗಿದ್ದು, ಅವರ ಹೆಸರಿಗೆ ಪಹಣಿ ಪತ್ರಿಕೆ ಬಂದಿರುತ್ತದೆ ಎಂದರೆ ಹೌದು. ಟಿ ಬಸಪ್ಪಗಾರಿ ಚನ್ನಬಸಪ್ಪ ಇವರು ಟಿ ರಂಗಪ್ಪನ ತಾತ ಎಂದರೆ ಹೌದು. ನಾನು ಕಂದಾಯ ದಾಖಲಾತಿಗಳನ್ನು ಟಿ ನಿಂಗಪ್ಪ ತಂದೆ ಚನ್ನಬಸಪ್ಪ ಅಲಿಯಾಸ್ ಬಸಪ್ಪ ಎಂದು ಇರಬೇಕಾಗಿದ್ದು ಟಿ ರಂಗಪ್ಪ ಎಂದು ತಪ್ಪಾಗಿ ನಮೂದಾಗಿದೆ ಎಂದು ಯಾವ ಆಧಾರದ ಮೇಲೆ ಹೇಳುತ್ತಿದ್ದೇನೆ ಎನನ್ನ ತಂದೆಯ ಹೆಸರು ಬಸಪ್ಪ ಆದ ಕಾರಣ ಆ ರೀತಿ ಹೇಳುತ್ತಿದ್ದೇನೆ. ಇದಕ್ಕೆ ಸಂಬಂಧಪಟ್ಟಂತೆ ನಾನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

1968 ರಿಂದ ಪಹಣಿ ಪತ್ರಿಕೆಗಳು ಟಿ ರಂಗಪ್ಪನ ಹೆಸರಿಗೆ ನಡೆದುಕೊಂಡು ಬರುತ್ತಿದೆ ಎಂದರೆ ಸುಳ್ಳು. 50 ವರ್ಷಗಳಿಂದ ಪಹಣಿ ಪತ್ರಿಕೆಗಳು ಟಿ ರಂಗಪ್ಪನ ಹೆಸರಿಗೆ ನಡೆದುಕೊಂಡು ಬರುತ್ತಿದೆ ಎಂದರೆ ಸುಳ್ಳು. ಪಹಣಿ ಪತ್ರಿಕೆಗಳಲ್ಲಿ ಹೆಸರು ತಪ್ಪಾಗಿದೆ ಎಂಬುದರ ಬಗ್ಗೆ ಯಾವ ಕ್ರಮ ಕೈಗೊಂಡಿದ್ದೇನೆ ಎಂದರೆ ನಾವು ಪ್ರತಿವಾದಿಗೆ ವಕೀಲರ ಮೂಲಕ ನೋಟಿಸನ್ನು ನೀಡಿರುತ್ತೇನೆ. ನಾನು ಕಂದಾಯ ಅಧಿಕಾರಿಗಳಿಗೆ ದಾಖಲಾತಿಗಳನ್ನು ಸರಿ ಮಾಡಿಕೊಡಲು ಯಾವುದೇ ಕ್ರಮ ಕೈಗೊಂಡಿಲ್ಲ.

ದಾವಾ ಸ್ವತ್ತಿನ ಪೂರ್ವಕ್ಕೆ ಮಲ್ಲಮ್ಮ, ಕೊಟ್ರೇಶಪ್ಪ, ಈಶ್ವರಪ್ಪ, ಮಹಾಲಿಂಗಪ್ಪ, ಕುಂಬಾರ ಕೊಟ್ರೇಶ, ಕುಂಬಾರ ಕೊಟ್ರಮ್ಮ ಇವರುಗಳ ಆಸ್ತಿ ಇವೆ. ಪಶ್ಚಿಮಕ್ಕೆ ನಾರಮ್ಮರವರ ಹೊಲ ಇದೆ. ಉತ್ತರಕ್ಕೆ ನೀಲಮ್ಮ, ಕರಿಯಮ್ಮ ರವರ ಆಸ್ತಿ ಇವೆ. ದಕ್ಷಿಣಕ್ಕೆ ಬಣಗಾರ ಚನ್ನಬಸಪ್ಪ ರವರ ಆಸ್ತಿ ಇದೆ. ಇದೆ ಚೆಕ್‌ಬಂದಿಯನ್ನು ವಾದಪತ್ರದಲ್ಲಿ ಹೇಳಿ ಬರೆಸಿರುತ್ತೇನೆ. ನಾನು ಈಗ ಹೇಳುತ್ತಿರುವ ಚೆಕ್‌ಬಂದಿಗೂ ದಾವಾ ಆಸ್ತಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಓ.ಎಸ್. ನಂ. 149/2016

ಪಿ.ಡಬ್ಲ್ಯು: 01 (Vijay Kumar)

ದಿಃ 24.06.1970 ರಲ್ಲಿ ದಾವಾ ಆಸ್ತಿಯನ್ನು ಪ್ರತಿವಾದಿಯ ತಂದೆ ಹಾಲವ್ವ ತಂದೆ ಟಿ ಬಸಪ್ಪರವರಿಂದ ನೊಂದಾಯಿತ ಕ್ರಯ ಪತ್ರದ ಮೂಲಕ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದಾದ ನಂತರ ಅವರ ಹೆಸರಿಗೆ ಬದಲಾವಣೆಯಾಗಿರುತ್ತದೆ ಎಂದರೆ ಹೌದು. ಪ್ರತಿವಾದಿಯ ತಂದೆಯ ಜೀವಂತ ಕಾಲದಲ್ಲಿ ಆತನ ತಂದೆ ಹಾಗೂ ಅನಂತರ ಪ್ರತಿವಾದಿ ದಾವಾ ಸ್ವತ್ತನ್ನು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಾವೇ ಸ್ವಾಧೀನದಲ್ಲಿದ್ದೇವೆ. ನನಗೆ ಈ ದಾವಾ ಸ್ವತ್ತಿನ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ, ಹಾಗಿದ್ದರು ಸಹ ದಾವಾ ಆಸ್ತಿ ನನ್ನ ತಾತನ ಆಸ್ತಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲದೆ ಇದ್ದರು ಸಹ ಪ್ರತಿವಾದಿಯಿಂದ ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.